ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 404
ಸದಸ್ಯರ ಹೆಸರು : ಶ್ರೀ ರಘುನಾಥ ರಾವ್ ಮಲ್ಕಾಪೂರೆ
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 06-03-2020

<table>
<tr><th>ಕ್ರಸ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಬೀದರ್‌ನಿಂದ ಹೈದರಾಬಾದ್ ಮಾರ್ಗವಾಗಿ ಬೆಂಗಳೂರಿಗೆ ಒಟ್ಟು ಎಷ್ಟು ಬಸ್ಸುಗಳು ಸಂಚರಿಸುತ್ತಿವೆ; (ಬಸ್ಸುಗಳ ವಿವರ ನೀಡುವುದು)</td><td>ಬೀದರ್‌ನಿಂದ ಹೈದರಾಬಾದ್ ಮಾರ್ಗವಾಗಿ ಬೆಂಗಳೂರಿಗೆ ಪ್ರತಿ ದಿನ ಒಟ್ಟು 5 ವಾಹನಗಳು ಕಾರ್ಯಾಚರಣೆಯಲ್ಲಿರುತ್ತವೆ. ವಿವರಗಳು ಈ ಕೆಳಗಿನಂತಿರುತ್ತವೆ.
<table>
<tr><th rowspan="2">ಕ್ರ ಸಂ</th><th rowspan="2">ಘಟಕ</th><th rowspan="2">ಅನುಸೂಚಿ ಸಂಖ್ಯೆ</th><th colspan="2">ಮಾರ್ಗ</th><th rowspan="2">ವಾಹನದ ಮಾದರಿ</th><th rowspan="2">ನಿರ್ಗಮನ ಸಮಯ</th></tr>
<tr><th>ಯಿಂದ</th><th>ವರೆಗೆ</th></tr>
<tr><td>1</td><td>ಬೀದರ-1</td><td>5/6</td><td>ಬೀದರ</td><td>ಬೆಂಗಳೂರು</td><td>ನಾನ್ ಎಸಿ ಸ್ಲೀಪರ್</td><td>18.30</td></tr>
<tr><td>2</td><td>ಬೀದರ-1</td><td>178/179</td><td>ಬೀದರ</td><td>ಬೆಂಗಳೂರು</td><td>ರಾಜಹಂಸ</td><td>18.00</td></tr>
<tr><td>3</td><td>ಭಾಲ್ಕಿ</td><td>1/2</td><td>ಭಾಲ್ಕಿ</td><td>ಬೆಂಗಳೂರು</td><td>ರಾಜಹಂಸ</td><td>16.30</td></tr>
<tr><td>4</td><td>ಔರಾದ</td><td>47/48</td><td>ಔರಾದ</td><td>ಬೆಂಗಳೂರು</td><td>ರಾಜಹಂಸ</td><td>15.30</td></tr>
<tr><td>5</td><td>ಬೆಂಗಳೂರು-2</td><td>158/159</td><td>ಬೀದರ</td><td>ಬೆಂಗಳೂರು</td><td>ಐರಾವತ್ ಮಲ್ಟಿ ಎಕ್ಸಲ್</td><td>17.00</td></tr>
</table></td></tr>
<tr><td>ಆ</td><td>ಬೀದರ್‌ನಿಂದ ಬೆಂಗಳೂರಿಗೆ (ಹೈದರಾಬಾದ್ ನಗರದ ಬಸ್ ನಿಲ್ದಾಣಕ್ಕೆ ಹೋಗದೆ) ನೇರವಾಗಿ ಹೈದರಾಬಾದ್ ರಿಂಗ್ ರಸ್ತೆಯ ಮೂಲಕವೇ ಹೋಗಲು ಹೊಸದಾಗಿ ಎ.ಸಿ.ಸ್ಲೀಪರ್ ಕೋಚ್ ಬಸ್ ಓಡಿಸಿದಲ್ಲಿ ಬೀದರ್ ಜನರಿಗೆ ಬೆಂಗಳೂರಿಗೆ ಸರಿಯಾದ ಸಮಯಕ್ಕೆ ಹೋಗಲು ಮತ್ತು ಬರಲು ಅನುಕೂಲವಾಗುತ್ತದೆ. ಈ ಅನುಕೂಲ ಮಾಡಿಕೊಡಲು ಸರ್ಕಾರವು ಯಾವ ಕ್ರಮ ಕೈಗೊಳ್ಳುವುದು? (ಮಾಹಿತಿ ನೀಡುವುದು)</td><td>ಬೀದರ್-ಬೆಂಗಳೂರು ಮಾರ್ಗದಲ್ಲಿ (ಹೈದರಾಬಾದ್ ನಗರದ ಬಸ್ ನಿಲ್ದಾಣಕ್ಕೆ ಹೋಗದೆ) ನೇರವಾಗಿ ಹೈದರಾಬಾದ್ ರಿಂಗ್ ರಸ್ತೆಯ ಮೂಲಕವೇ ಜುಲೈ-2012ರಿಂದ ನವೆಂಬರ್-2012ರ ಅವಧಿಯಲ್ಲಿ ಪ್ರತಿ ದಿನ ಒಂದು ಎಸಿ ಕರೋನಾ ಸ್ಲೀಪರ್ ಸಾರಿಗೆ ಕಾರ್ಯಾಚರಣೆಯಲ್ಲಿತ್ತು. ಆದರೆ, ಆ ಅವಧಿಯಲ್ಲಿ ಸದರಿ ಸಾರಿಗೆಗೆ ಪ್ರತಿ ಕಿ.ಮೀ.ಗೆ ರೂ.35.00ರಷ್ಟು ಸರಾಸರಿ ವೆಚ್ಚವಾಗಿದ್ದು, ಅದಕ್ಕೆ ಪ್ರತಿಯಾಗಿ ಸಾರಿಗೆ ಆದಾಯ ಪ್ರತಿ ಕಿ.ಮೀ.ಗೆ ಕೇವಲ ರೂ.21.00ರಷ್ಟು ಮಾತ್ರ ಬಂದಿರುತ್ತದೆ. ಸರಾಸರಿ ರೂ.14.00ರಷ್ಟು ಪ್ರತಿ ಕಿ.ಮೀ.ಗೆ ನಷ್ಟ ಉಂಟಾಗಿದ್ದರಿಂದ, ಸದರಿ ಸಾರಿಗೆಯನ್ನು ಸ್ಥಗಿತಗೊಳಿಸಲಾಗಿದೆ.

ಪ್ರಸ್ತುತ ಬೀದರ್-ಬೆಂಗಳೂರು ನಾನ್ ಎಸಿ ಸಾರಿಗೆಗೆ ಹೈದರಾಬಾದ್ ಬಸ್ ನಿಲ್ದಾಣದಿಂದ ಬೆಂಗಳೂರಿನವರೆಗೆ ವಾರಾಂತ್ಯ ದಿನಗಳಲ್ಲಿ ಸರಾಸರಿ 24 ಜನ ಪ್ರಯಾಣಿಕರು ಹಾಗೂ ಉಳಿದ ದಿನಗಳಲ್ಲಿ ಸರಾಸರಿ 12ರಿಂದ 15 ಜನ ಪ್ರಯಾಣಿಕರು ಪ್ರಯಾಣಿಸುತ್ತಿದ್ದಾರೆ. ಬೀದರ್ ಬಸ್ ನಿಲ್ದಾಣದಿಂದ ಬೆಂಗಳೂರಿಗೆ ವಾರಾಂತ್ಯ ದಿನಗಳಲ್ಲಿ ಸರಾಸರಿ 4 ರಿಂದ 5 ಜನ ಪ್ರಯಾಣಿಕರು ಹಾಗೂ ಉಳಿದ ದಿನಗಳಲ್ಲಿ ಸರಾಸರಿ 2 ರಿಂದ 3 ಜನ ಪ್ರಯಾಣಿಕರು ಮಾತ್ರ ಪ್ರಯಾಣಿಸುತ್ತಿದ್ದಾರೆ. ಬೀದರ್‌ನಿಂದ ನೇರವಾಗಿ (ಹೈದರಾಬಾದ್ ನಗರದ ಬಸ್ ನಿಲ್ದಾಣಕ್ಕೆ ಹೋಗದೆ) ಬೆಂಗಳೂರಿಗೆ ಪ್ರಯಾಣಿಸುವ ಪ್ರಯಾಣಿಕರ ಸಂಖ್ಯೆ ಕಡಿಮೆಯಾಗಿರುತ್ತದೆ. ಆದ್ದರಿಂದ, ಹೈದರಾಬಾದ್ ನಗರದ ಬಸ್ ನಿಲ್ದಾಣದ ಮುಖಾಂತರವೇ ಮೇಲ್ಕಂಡ ಸಾರಿಗೆಗಳನ್ನು ಕಾರ್ಯಾಚರಿಸಲಾಗುತ್ತಿದೆ.

ಎಸಿ ಸ್ಲೀಪರ್ ಸಾರಿಗೆಯನ್ನು ಸದರಿ ಮಾರ್ಗದಲ್ಲಿ ಹೈದರಾಬಾದ್ ನಗರದ ಬಸ್ ನಿಲ್ದಾಣಕ್ಕೆ ಹೋಗದೆ, ನೇರವಾಗಿ ಹೈದರಾಬಾದ್ ರಿಂಗ್ ರಸ್ತೆಯ ಮೂಲಕ ಹೊಸದಾಗಿ ಕಾರ್ಯಾಚರಣೆ ಮಾಡುವುದು ಸಂಸ್ಥೆಯ ಆರ್ಥಿಕ ಹಿತದೃಷ್ಟಿಯಿಂದ ಸೂಕ್ತವಾಗಿರುವುದಿಲ್ಲ.</td></tr>
</table>

ಸಂಖ್ಯೆ: ಟಿಡಿ 44 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು